ಯುವಜನ ಸೇವೆ ಇಲಾಖೆಗೆ ಹಸ್ತಾಂತರಗೊಂಡ ಕ್ರೀಡಾಂಗಣಗಳು

646 (557) ಶ್ರೀ ಎಂ. ಕೃಷ್ಣಪ್ಪ : ಮಾನ್ಯ ಜವಳಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯುವಜನ ಸೇವಾ ಇಲಾಖೆ ವ್ಯಾಪ್ತಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಹಸ್ತಾಂತರಿಸಲ್ಪಟ್ಟ ಕ್ರೀಡಾಂಗಣಗಳೆಷ್ಟು (ವಿವರ ನೀಡುವುದು);

ಆ) ಈ ಕ್ರೀಡಾಂಗಣಗಳಿಗೆ ಯುವಜನ ಸೇವಾ ಇಲಾಖೆಯಿಂದ ಇದುವರೆಗೂ ವೆಚ್ಚ ಮಾಡಲಾಗಿರುವ ಹಣವೆಷ್ಟು;

ಇ) ಇದರಿಂದ ಇಲಾಖೆಗೆ ಹಾಗೂ ಕ್ರೀಡಾಪಡುಗಳಿಗೆ ಆಗಿರುವ ಅನುಕೂಲತೆಗಳೇನು?

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಜವಳಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) ಯುವಜನ ಸೇವಾ ಇಲಾಖೆ ವ್ಯಾಪ್ತಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಹಸ್ತಾಂತರಿಸಲ್ಪಟ್ಟ ಕ್ರೀಡಾಂಗಣಗಳು–3

1. ಖೋ–ಖೋ ಕ್ರೀಡಾಂಗಣ/ಆಟದ ಮೈದಾನ, ಹೊಂಬೇಗೌಡನಗರ, ಬೆಂಗಳೂರು.
2. ವಿದ್ಯಾಪೀಠ ಕಬ್ಬಡ್ಡಿ ಕ್ರೀಡಾಂಗಣ/ ಆಟದ ಮೈದಾನ, ಬನಶಂಕರಿ, ಬೆಂಗಳೂರು.
3. ಜೆ.ಪಿ.ನಗರ ಕ್ರಿಕೆಟ್ ಕ್ರೀಡಾಂಗಣ/ಆಟದ ಮೈದಾನ

ಆ) ಕ್ರಮ ಸಂಖ್ಯೆ:01 ಮತ್ತು 02 ರ ಕ್ರೀಡಾಂಗಣ / ಆಟದ ಮೈದಾನಗಳನ್ನು 1997 ರಲ್ಲಿ ನಡೆದ ನಾಲ್ಕನೇ ರಾಷ್ಟ್ರೀಯ ಕ್ರೀಡಾಕೂಟದ ಸಮಯದಲ್ಲಿ ಖೋ–ಖೋ ಕ್ರೀಡೆಯನ್ನು ಮತ್ತು ಕಬ್ಬಡ್ಡಿ ಕ್ರೀಡೆಯನ್ನು ನಡೆಸಲು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಿಸ ಲಾಗಿತ್ತು. ಈ ಕ್ರೀಡಾಕೂಟವನ್ನು ನಡೆಸಲು ಅಗತ್ಯ ಸೌಕರ್ಯಗಳನ್ನು ಕಲ್ಪಿಸಲು ವೆಚ್ಚ ಮಾಡಲಾಗಿರುವ ವಿವರ ಮತ್ತು ನಂತರದ ದಿನಗಳಲ್ಲಿ

ದೈನಂದಿನ ನಿರ್ವಹಣೆಗೆ ವೆಚ್ಚ ಮಾಡಲಾಗಿರುವ ವಿವರಗಳು ಈ ಕೆಳಕಂಡಂತಿವೆ.

ಕ್ರೀಡಾಂಗಣದ ಹೆಸರು	4ನೇ ರಾಷ್ಟ್ರೀಯ ಕ್ರೀಡಾ ಕೂಟದ ಸಂದರ್ಭದಲ್ಲಿ ವೆಚ್ಚ ಮಾಡಲಾದ ಮೊತ್ತ	ಕಳೆದ ಐದು ವರ್ಷಗಳಲ್ಲಿ ದೈನಂದಿನ ನಿರ್ವಹಣೆಗೆ ಮತ್ತು ದುರಸ್ತಿಗೆ ವೆಚ್ಚ ಮಾಡಲಾಗಿರುವ ಮೊತ್ತ
ಖೋ–ಖೋ ಕ್ರೀಡಾಂಗಣ/ ಆಟದ ಮೈದಾನ, ಹೊಂಬೇಗೌಡನಗರ, ಬೆಂಗಳೂರು	ರೂ.43,92,458.00	ರೂ.13,86,838.00
ವಿದ್ಯಾಪೀಠ ಕಬ್ಬಡ್ಡಿ ಕ್ರೀಡಾಂಗಣ / ಆಟದ ಮೈದಾನ, ಬನಶಂಕರಿ, ಬೆಂಗಳೂರು	ರೂ.55,54,056.00	ರೂ.11,58,294.00
ಜೆ.ಪಿ.ನಗರ ಆಟದ ಮೈದಾನದ	----	ರೂ.13,99,547.00

ಇ) ನಾಲ್ಕನೇ ರಾಷ್ಟ್ರೀಯ ಕ್ರೀಡಾಕೂಟವನ್ನು ಯಶಸ್ವಿಯಾಗಿ ನಡೆಸಲು ಅನುಕೂಲವಾಗಿದೆ. ಅಲ್ಲದೆ ಈ ಸಂದರ್ಭದಲ್ಲಿ ಕ್ರೀಡಾಕೂಟವನ್ನು ಯಶಸ್ವಿಯಾಗಿ ಸಂಘಟಿಸಲು ಕ್ರೀಡಾಂಗಣವನ್ನು ಅಭಿವೃದ್ಧಿಗೊಳಿಸಲಾಗಿದೆ. ನಾಲ್ಕನೇ ರಾಷ್ಟ್ರೀಯ ಕ್ರೀಡಾಕೂಟದ ನಂತರ, ಕಬ್ಬಡ್ಡಿ, ಖೋ–ಖೋ, ನೆಟ್‌ಬಾಲ್, ಹ್ಯಾಂಡ್‌ಬಾಲ್ ಮತ್ತು ಕ್ರಿಕೆಟ್ ತರಬೇತಿಗಳನ್ನು ಕ್ರೀಡಾಂಗಣಗಳಲ್ಲಿ ನಡೆಸಲಾಗುತ್ತಿದೆ.